# ಜಿಲ್ಲಾ ಪಂಚಾಯತ್, ರಾಯಚೂರು

**ಸಂಖ್ಯೆ:ಜಿಪಂರಾ/ಸುಗ್ರಾಯೋ3&4ಹಂ/ಗ.ಯಂ.ತ.ಕಾ/2012-13** **ದಿನಾಂಕ:01-03-2013**

**ಗೆ,**
ಪಂಚಾಯತ್ ಅಭಿವೃದ್ಧಿ ಅಧಿಕಾರಿ,
ಗ್ರಾಮ ಪಂಚಾಯತ್ ________________
ತಾಲೂಕ ________________ಜಿಲ್ಲಾ ರಾಯಚೂರು

**ಮಾನ್ಯರೇ,**

**ವಿಷಯ:-** ಸುವರ್ಣ ಗ್ರಾಮೋದಯ ಯೋಜನೆ 3 ಮತ್ತು 4ನೇ ಹಂತದ ಗಣಕ ಯಂತ್ರ ತರಬೇತಿ ಕಾರ್ಯಕ್ರಮ ಜರುಗಿಸುವ ಬಗ್ಗೆ.

**ಉಲ್ಲೇಖ:-**1) ಸರ್ಕಾರದ ಆದೇಶ ಸಂಖ್ಯೆ:ಗ್ರಾಅಪ:ಸುಗ್ರಾಯೋ:2009 ದಿ:18-5-09.
2) ಸರ್ಕಾರದ ಆದೇಶ ಸಂಖ್ಯೆ:ಗ್ರಾಅಪ:ಸುಗ್ರಾಯೋ:2009 ದಿ:26-4-11.
3) ಈ ಕಛೇರಿ ಪತ್ರ ಸಂಖ್ಯೆ:ಜಿಪರಾ/ಸುಗ್ರಾಯೋ/3ನೇ ಹಂತ/2009-10 ದಿನಾಂಕ:20-02-2010.
4) ಈ ಕಛೇರಿ ಪತ್ರ ಸಂಖ್ಯೆ:ಜಿಪರಾ/ಸುಗ್ರಾಯೋ/4ನೇ ಹಂತ/2012-13 ದಿನಾಂಕ:29-12-2012.

ಮೇಲ್ಕಂಡ ವಿಷಯ ಹಾಗೂ ಉಲ್ಲೇಖಕ್ಕೆ ಸಂಬಂಧಿಸಿದಂತೆ, ಸುವರ್ಣ ಗ್ರಾಮೋದಯ ಯೋಜನೆ 3 ಮತ್ತು 4ನೇ ಹಂತದ ಸಮಗ್ರ ಗ್ರಾಮಾಭಿವೃದ್ಧಿ ಯೋಜನೆಗಳನ್ನು ಉಲ್ಲೇಖ(3) ಮತ್ತು (4)ರಲ್ಲಿ ಅನುಮೋದಿಸಲಾಗಿರುತ್ತದೆ. ಸದರಿ ಗ್ರಾಮಾಭಿವೃದ್ಧಿ ಯೋಜನೆಯಲ್ಲಿ ತರಬೇತಿಗಾಗಿ ಅವಕಾಶ ಕಲ್ಪಿಸಿಕೊಂಡಂತೆ ವಿವಿಧ ಆರ್ಥಿಕ ವಲಯಗಳಲ್ಲಿ ಉದ್ಯೋಗ ಪಡೆಯಲು ವಿದ್ಯಾವಂತ/ಸಾಕ್ಷರತೆ ಹೊಂದಿದ್ದ ಯುವಕರಿಗೆ ಸಾಧ್ಯವಾಗುವಂತೆ ನೋಡಿಕೊಳ್ಳಲು ತರಬೇತಿ ಅವಶ್ಯವಾಗಿದೆ. ಕಂಪ್ಯೂಟರ್ ಉಪಯೋಗದ ತರಬೇತಿ ಉತ್ಪಾದನೆ ಮತ್ತು ಸೇವಾ ವಲಯಗಳಲ್ಲಿ ಬೇಕಾದ ಕೌಶಲ್ಯ ಕುರಿತು ಗ್ರಾಮೀಣ ಯುವಕರಿಗೆ ತರಬೇತಿ ನೀಡಲು ಹಾಗೂ ಆಯ್ದ ಗ್ರಾಮಗಳಲ್ಲಿ ಸಾಂಸ್ಥಿಕ ತರಬೇತಿ ಸೌಕರ್ಯಗಳನ್ನು ಗ್ರಾಮೀಣ ಯುವಕರಿಗೆ ಲಭ್ಯವಾಗುವಂತೆ ನೋಡಿಕೊಳ್ಳಬೇಕೆಂಬ ನಿರ್ದೇಶನಗಳು ಮಾರ್ಗಸೂಚಿಯಲ್ಲಿವೆ.

ಈ ದಿಶೆಯಲ್ಲಿ, ಸುವರ್ಣ ಗ್ರಾಮೋದಯ ಯೋಜನೆ 3 ಮತ್ತು 4ನೇ ಹಂತದಲ್ಲಿ ಜಿಲ್ಲೆಯಲ್ಲಿ ಆಯ್ಕೆಯಾದ ಗ್ರಾಮಗಳಲ್ಲಿ ಕಂಪ್ಯೂಟರ್ ತರಬೇತಿಗಾಗಿ ಕಾಯ್ದಿರಿಸಿರುವ ಅನುದಾನಕ್ಕೆ ತಕ್ಕಂತೆ, ವಿದ್ಯಾವಂತ ಯುವಕ/ಯುವತಿಯರಿಗೆ ಅನುಕೂಲವಾಗುವಂತೆ ಕಂಪ್ಯೂಟರ್ ಉಪಯೋಗದ ವೃತ್ತಿಪರ ತರಬೇತಿ ಪಡೆಯಲು ಆಸಕ್ತಿರಿರುವ ಅಭ್ಯರ್ಥಿಗಳ ಆಯ್ಕೆಗಾಗಿ ಅಗತ್ಯ ಪ್ರಚಾರ ಮಾಡಿ, ಅಭ್ಯರ್ಥಿಗಳನ್ನು ಗ್ರಾಮ ಸಭೆ ಮೂಲಕ ಆಯ್ಕೆ ಮಾಡಿ, ಕ್ರೋಢೀಕೃತ ಪಟ್ಟಿ **ದಿನಾಂಕ:18-03-2013**ರೊಳಗಾಗಿ ಸಲ್ಲಿಸಲು ಸೂಚಿಸಲಾಗಿದೆ. ಅರ್ಜಿ ನಮೂನೆ ಈ ಪತ್ರಕ್ಕೆ ಲಗತ್ತಿಸಿದೆ.

ಸುವರ್ಣ ಗ್ರಾಮೋದಯ ಯೋಜನೆಯಡಿ ಆಯ್ದ ಗ್ರಾಮಗಳ ವಿದ್ಯಾವಂತ ಯುವಕ/ಯುವತಿಯರಿಗಾಗಿ ಗಣಕಯಂತ್ರದ ವೃತ್ತಿಪರ ತರಬೇತಿಗಳನ್ನು ಕರ್ನಾಟಕ ಸಾರ್ವಜನಿಕ ಸಂಗ್ರಹಣೆಯಲ್ಲಿ ಪಾರದರ್ಶಕತೆ ನಿಯಮ (KTPP) 4(ಜಿ)ರಡಿ ವಿನಾಯ್ತಿ ಹೊಂದಿರುವ ಹಾಗೂ ಕರ್ನಾಟಕ ಸರ್ಕಾರದ ಒಂದು ಉದ್ಯಮವಾಗಿರುವ **ಕರ್ನಾಟಕ ರಾಜ್ಯ ವಿದ್ಯುನ್ಮಾನ ಅಭಿವೃದ್ಧಿ ನಿಗಮ ನಿಯಮಿತ, ಬೆಂಗಳೂರು, (KEONICS)** ರವರ ಮೂಲಕ ಆಯೋಜಿಸಲು ನಿರ್ಧರಿಸಿದ್ದು, ಅರ್ಹ/ಆಸಕ್ತ ಅಭ್ಯರ್ಥಿಗಳಿಂದ ನಿಗದಿತ ನಮೂನೆಯಲ್ಲಿ ಅರ್ಜಿ ಪಡೆದು ಅಭ್ಯರ್ಥಿಗಳ ಪಟ್ಟಿಯನ್ನು ತಯಾರಿಸಿ, ತಕ್ಷಣ ಈ ಕಾರ್ಯಾಲಯಕ್ಕೆ ಸಲ್ಲಿಸಲು ಸೂಚಿಸಿದೆ. ಈ ಕುರಿತು ಹೆಚ್ಚಿನ ವಿವರಗಳ ಜಿಲ್ಲಾ ಪಂಚಾಯತಿಯ ಅಧಿಕೃತ ವೆಬ್ ಸೈಟ್ ಆದ **http:zpraichur.kar.nic.in** ರಿಂದ ಪಡೆಯಬಹುದು.

**ತಮ್ಮ ವಿಶ್ವಾಸಿ,**

4.3.13

**ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ,**
**ಜಿಲ್ಲಾ ಪಂಚಾಯತ್, ರಾಯಚೂರು.**

**ಪ್ರತಿಯನ್ನು:-**
1) ಜಿಲ್ಲೆಯ ಎಲ್ಲಾ ತಾಲೂಕ ಪಂಚಾಯತ್ ಕಾರ್ಯನಿರ್ವಾಹಕ ಅಧಿಕಾರಿಗಳಿಗೆ ಸೂಕ್ತ ಕ್ರಮಕ್ಕಾಗಿ.
2) ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ರಾಜ್ಯ ವಿದ್ಯುನ್ಮಾನ ಅಭಿವೃದ್ಧಿ ನಿಗಮ ನಿಯಮಿತ, ರೇಸ್ ಕೋರ್ಸ್ ರಸ್ತೆ, ಬೆಂಗಳೂರು ಇವರಿಗೆ ಮಾಹಿತಿಗಾಗಿ.

# ಜಿಲ್ಲಾ ಪಂಚಾಯತ್, ರಾಯಚೂರು

**ಸಂಖ್ಯೆ:ಜಿಪಂರಾ/ಸುಗ್ರಾಯೋ1&4ಹಂ/ವಿವಿಧವೃತ್ತಿತ/2012-13** **ದಿನಾಂಕ:01-03-2013**

**ಗೆ,**
ಪಂಚಾಯತ್ ಅಭಿವೃದ್ದಿ ಅಧಿಕಾರಿ,
ಗ್ರಾಮ ಪಂಚಾಯತ್ ________________
ತಾಲೂಕ ______________ಜಿಲ್ಲಾ ರಾಯಚೂರು

**ಮಾನ್ಯರೇ,**

**ವಿಷಯ:-** ಸುವರ್ಣ ಗ್ರಾಮೋದಯ ಯೋಜನೆ 1ರಿಂದ 4ನೇ ಹಂತದವರೆಗೆ ವಿವಿಧ ವೃತ್ತಿ ತರಬೇತಿ ಕಾರ್ಯಕ್ರಮ ಜರುಗಿಸುವ ಬಗ್ಗೆ.

**ಉಲ್ಲೇಖ:-**1) ಸರ್ಕಾರದ ಪತ್ರ ಸಂಖ್ಯೆ:ಗ್ರಾಅಪ:71:ಗ್ರಾಇಂಕಾ:2006 ದಿ:24-08-2007, 01-09-2007 ಮತ್ತು 10-09-2007.
2) ಸರ್ಕಾರದ ಪತ್ರ ಸಂಖ್ಯೆ:ಗ್ರಾಅಪ:92:ಸುಗ್ರಾಯೋ:2008 ದಿ:01-01-09.
3) ಸರ್ಕಾರದ ಆದೇಶ ಸಂಖ್ಯೆ:ಗ್ರಾಅಪ: :ಸುಗ್ರಾಯೋ:2009 ದಿ:18-5-09.
4) ಸರ್ಕಾರದ ಆದೇಶ ಸಂಖ್ಯೆ:ಗ್ರಾಅಪ:65:ಸುಗ್ರಾಯೋ:2009 ದಿ:26-4-11

ಮೇಲ್ಕಂಡ ವಿಷಯ ಹಾಗೂ ಉಲ್ಲೇಖಕ್ಕೆ ಸಂಬಂಧಿಸಿದಂತೆ, ಉಲ್ಲೇಖ(1ರಿಂದ4)ರ ಸರ್ಕಾರದ ಆದೇಶದ ಮೇರೆಗೆ ಸುವರ್ಣ ಗ್ರಾಮೋದಯ ಯೋಜನೆಯಡಿ 1 ರಿಂದ 4ನೇ ಹಂತದವರೆಗಿನ ಆಯ್ಕೆಯಾದ ಗ್ರಾಮಗಳ ಸಮಗ್ರ ಗ್ರಾಮಾಭಿವೃದ್ಧಿ ಯೋಜನೆಗಳನ್ನು ಅನುಮೋದಿಸಲಾಗಿರುತ್ತದೆ. ಸದರಿ ಗ್ರಾಮಾಭಿವೃದ್ಧಿ ಯೋಜನೆಯಲ್ಲಿ ತರಬೇತಿಗಾಗಿ ಅವಕಾಶ ಕಲ್ಪಿಸಿಕೊಂಡಂತೆ ವಿವಿಧ ಆರ್ಥಿಕ ವಲಯಗಳಲ್ಲಿ ಉದ್ಯೋಗ ಪಡೆಯಲು ವಿದ್ಯಾವಂತ/ಸಾಕ್ಷರತೆ ಹೊಂದಿದ್ದ ಯುವಕರಿಗೆ ಸಾಧ್ಯವಾಗುವಂತೆ ನೋಡಿಕೊಳ್ಳಲು ತರಬೇತಿ ಅವಶ್ಯವಾಗಿದೆ. ಕಂಪ್ಯೂಟರ್ ಉಪಯೋಗದ ತರಬೇತಿ ಉತ್ಪಾದನೆ ಮತ್ತು ಸೇವಾ ವಲಯಗಳಲ್ಲಿ ಬೇಕಾದ ಕೌಶಲ್ಯ ಕುರಿತು ಗ್ರಾಮೀಣ ಯುವಕರಿಗೆ ತರಬೇತಿ ನೀಡಲು ಹಾಗೂ ಆಯ್ದ ಗ್ರಾಮಗಳಲ್ಲಿ ಸಾಂಸ್ಥಿಕ ತರಬೇತಿ ಸೌಕರ್ಯಗಳನ್ನು ಗ್ರಾಮೀಣ ಯುವಕರಿಗೆ ಲಭ್ಯವಾಗುವಂತೆ ನೋಡಿಕೊಳ್ಳಬೇಕೆಂಬ ನಿರ್ದೇಶನಗಳು ಮಾರ್ಗಸೂಚಿಯಲ್ಲಿವೆ.

ಈ ದಿಶೆಯಲ್ಲಿ, ಸುವರ್ಣ ಗ್ರಾಮೋದಯ ಯೋಜನೆ 1 ರಿಂದ 4ನೇ ಹಂತದವರೆಗೆ ಜಿಲ್ಲೆಯಲ್ಲಿ ಆಯ್ಕೆಯಾದ ಗ್ರಾಮಗಳಲ್ಲಿ ಕರ್ನಾಟಕ ಉದ್ಯಮಶೀಲತಾಭಿವೃದ್ಧಿ ಕೇಂದ್ರದ ವಿವಿಧ ವೃತ್ತಿ ತರಬೇತಿಗಾಗಿ ಕಾಯ್ದಿರಿಸಿರುವ ಅನುದಾನಕ್ಕೆ ತಕ್ಕಂತೆ ವಿದ್ಯಾವಂತ ಯುವಕ/ಯುವತಿಯರಿಗೆ ಅನುಕೂಲವಾಗುವಂತೆ ವಿವಿಧ ವೃತ್ತಿಗಳ ವೃತ್ತಿಪರ ತರಬೇತಿ ಪಡೆಯಲು ಆಸಕ್ತಿರಿರುವ ಅಭ್ಯರ್ಥಿಗಳ ಆಯ್ಕೆಗಾಗಿ ಅಗತ್ಯ ಪ್ರಚಾರ ಮಾಡಿ, ಅಭ್ಯರ್ಥಿಗಳನ್ನು ಗ್ರಾಮ ಸಭೆ ಮೂಲಕ ಆಯ್ಕೆ ಮಾಡಿ, ಕ್ರೋಢೀಕೃತ ಪಟ್ಟಿ **ದಿನಾಂಕ:18-03-2013** ರೊಳಗಾಗಿ ಸಲ್ಲಿಸಲು ಸೂಚಿಸಲಾಗಿದೆ. ಅರ್ಜಿ ನಮೂನೆ ಈ ಪತ್ರಕ್ಕೆ ಲಗತ್ತಿಸಿದೆ.

ಸುವರ್ಣ ಗ್ರಾಮೋದಯ ಯೋಜನೆಯಡಿ ಆಯ್ದ ಗ್ರಾಮಗಳ ವಿದ್ಯಾವಂತ ಯುವಕ/ಯುವತಿಯರಿಗಾಗಿ ವಿವಿಧ ವೃತ್ತಿಪರ ತರಬೇತಿಗಳನ್ನು ನೀಡುವ ಕರ್ನಾಟಕ ಸರ್ಕಾರದ ಒಂದು ಉದ್ಯಮವಾಗಿರುವ **ಕರ್ನಾಟಕ ಉದ್ಯಮಶೀಲತಾಭಿವೃದ್ಧಿ, ಕೇಂದ್ರ (ಸಿಡಾಕ್), ಧಾರವಾಡ (CEDOK)** ರವರ ಮೂಲಕ ಆಯೋಜಿಸಲು ನಿರ್ಧರಿಸಿದ್ದು, ಅರ್ಹ/ಆಸಕ್ತ ಅಭ್ಯರ್ಥಿಗಳ ಪಟ್ಟಿಯನ್ನು ತಯಾರಿಸಿ, ತಕ್ಷಣ ಈ ಕಾರ್ಯಾಲಯಕ್ಕೆ ಸಲ್ಲಿಸಲು ಸೂಚಿಸಿದೆ.

**ತಮ್ಮ ವಿಶ್ವಾಸಿ,**

**ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ,**
**ಜಿಲ್ಲಾ ಪಂಚಾಯತ್, ರಾಯಚೂರು.**

ಪ್ರತಿಯನ್ನು:-
1) ಜಿಲ್ಲೆಯ ಎಲ್ಲಾ ತಾಲೂಕ ಪಂಚಾಯತ್ ಕಾರ್ಯನಿರ್ವಾಹಕ ಅಧಿಕಾರಿಗಳಿಗೆ ಸೂಕ್ತ ಕ್ರಮಕ್ಕಾಗಿ
2) ಶ್ರೀ. ಜಿ.ಯು.ಹುಡೇದ್, ತರಬೇತಿ ಅಧಿಕಾರಿ, ಕರ್ನಾಟಕ ಉದ್ಯಮಶೀಲತಾಭಿವೃದ್ಧಿ, ಕೇಂದ್ರ(ಸಿಡಾಕ್), ಜಿಲ್ಲಾ ಕೈಗಾರಿಕಾ ಕೇಂದ್ರ, ಹೈದ್ರಬಾದ್ ರಸ್ತೆ, ರಾಯಚೂರು ರವರಿಗೆ ಸೂಕ್ತ ಕ್ರಮಕ್ಕಾಗಾಗಿ.

**F:\Jambunath\SGY-Letters1.doc**

# ಗ್ರಾಮ ಪಂಚಾಯತ್ ____________

## ಸುವರ್ಣ ಗ್ರಾಮೋದಯ ಯೋಜನೆ ಅಡಿಯಲ್ಲಿ ಕಂಪ್ಯೂಟರ್ /ಕೌಶಲ್ಯ ಅಭಿವೃದ್ಧಿ ತರಬೇತಿ ಕಾರ್ಯಕ್ರಮಕ್ಕಾಗಿ ಅರ್ಜಿ ಸಲ್ಲಿಸಿದ ಅಭ್ಯರ್ಥಿಗಳ ವಿವರ

| ಕ್ರ.ಸಂ | ಅಭ್ಯರ್ಥಿಯ ಹೆಸರು | ತಂದೆ/ಗಂಡನ ಹೆಸರು | ವಿಳಾಸ & ಮೊಬೈಲ್ ಸಂಖ್ಯೆ | ವಯಸ್ಸು (DoB) | ವಿದ್ಯಾಭ್ಯಾಸ | ಜಾತಿ/ ವರ್ಗ | ಅಂಗವಿಕಲರೆ | ಪಡೆಯಲಿಚ್ಚಿಸಿರುವ ತರಬೇತಿ ವಿವರ |
|---|---|---|---|---|---|---|---|---|
| 1 | 2 | 3 | 4 | 5 | 6 | 7 | 8 | 9 |
| | | | | | | | | |
| | | | | | | | | |
| | | | | | | | | |
| | | | | | | | | |
| | | | | | | | | |
| | | | | | | | | |

ಪಂಚಾಯತ್ ಅಭಿವೃದ್ಧಿ ಅಧಿಕಾರಿ,
ಗ್ರಾಮ ಪಂಚಾಯತ್ __________

ದೃಢೀಕರಿಸಿದೆ

ಕಾರ್ಯನಿರ್ವಾಹಕ ಅಧಿಕಾರಿ,
ತಾಲೂಕ ಪಂಚಾಯತ್ ___________